ಓಎಸ್. ನಂ.83/2023
ಡಿ.ಡಬ್ಲ್ಯೂ ಃ 1

**ದಿನಾಂಕಃ 29.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ವಿ.ಎಸ್.ಜೆ ವಕೀಲರಿಂದಃ**

ನಾನು ಬಿ.ಎ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದಾವಾ ಆಸ್ತಿಗೆ ಸಂಬಂಧಿಸಿದ ಖಾತಾನಕಲನ್ನು ನೋಡಿರುವುದಿಲ್ಲ. ನಿಪಿ 1 ನ್ನು ತೋರಿಸಿ ವಾದಿಗಳ ಹೆಸರು ನಮೂದು ಇದೆ ಎಂದು ತೋರಿಸಿ ಕೇಳಲಾಗಿ, ಹೌದು ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿ ವಾದಿಗಳ ಹೆಸರು ಮತ್ತು ಅವರ ತಂದೆಯ ಹೆಸರು ನಮೂದು ಇದೆ ಎಂದರೆ ನಿಜ. ವಾದಿಗಳು ಹಾಜರುಪಡಿಸಿದ ನಕಾಶೆ ತಪ್ಪಾಗಿದೆ ಎಂದು ಎಲ್ಲೂ ಪ್ರಶ್ನೆ ಮಾಡಿಲ್ಲರುವುದಿಲ್ಲ ಎಂದರೆ ಸರಿ. ನಮ್ಮ ಸರ್ವೆ ನಂಬರ ಮತ್ತು ವಾದಿಗಳ ಸರ್ವೆ ನಂಬರ ಬೇರೆ ಬೇರೆ ಇರುತ್ತವೆ ಎಂದರೆ ನಿಜ. ಸರ್ವೆ ನಂ.35 ವಾದಿಗಳ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.36 ರಲ್ಲಿ ಎರಡು ಪ್ಲಾಟಗಳನ್ನು ನಾನು ಖರೀದಿಸಿರುತ್ತೇನೆ ಎಂದರೆ ಸರಿ. ಸದರಿ ಪ್ಲಾಟಗಳು 15 X 30 ಮತ್ತು 15 X 30 ರಂತೆ ಇರುತ್ತವೆ. ವಾದಿಗಳ ಹೊಲ ದಕ್ಷಿಣ ದಿಕ್ಕಿಗೆ ನಮ್ಮ ಪ್ಲಾಟುಗಳು ಇರುತ್ತವೆ. ಸರ್ವೆ ನಂ.36 ಮತ್ತು 35 ರ ನಡುವೆ ಪೂರ್ವ-ಪಶ್ಚಿಮ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಎಷ್ಟು ಎತ್ತರ ಮತ್ತು ಎಷ್ಟು ಅಗಲ ಇರುತ್ತದೆ ಎಂದರೆ ಸದರಿ ರಸ್ತೆ ನೆಲಸಮ ಆಗಿರುವುದರಿಂದ ಎಷ್ಟು ಅಗಲ ಮತ್ತು ಎತ್ತ್ರ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಖರೀದಿಸುವ ಸಮಯದಲ್ಲಿ ರಸ್ತೆ ಇತ್ತು ಎಂದು ನುಡಿಯುತ್ತಾರೆ.

2. ನಾನು ಖರೀದಿಸಿದ ಎರಡು ಪ್ಲಾಟಗಳನ್ನು ಸೇರಿಸಿ 30 X 60 ರಲ್ಲಿ ಮನೆ ಕಟ್ಟಿದಿಯಾ ಎಂದು ಕೇಳಲು ಸಾಕ್ಷಿ ನನ್ನ ಅಳತೆಯಲ್ಲಿ ನಾನು ಕಟ್ಟಿಸಿದ್ದೇನೆ. ಆದರೆ ನಾನು ಮುಂದೆ 8 ಅಡಿ ಜಾಗೆಯನ್ನು ತೆಗೆದುಕೊಂಡಿರುತ್ತೇನೆ. ಸದರಿ ಜಾಗೆಯು ಉತ್ತ್ರದಿಂದ ದಕ್ಷಿಣಕ್ಕೆ ಹೋಗಿರುತ್ತದೆ.

ಸಾಕ್ಷಿ ಮುಂದುವರೆದು ಸದರಿ 8 ಅಡಿ ಜಾಗೆ ಸರ್ವೆ ನಂ.36 ಕ್ಕೆ ಹೊಂದಿಕೊಂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ 8 ಅಡಿ ಜಾಗೆ ನನ್ನದಲ್ಲ, ಸರ್ವೆ ನಂ.36 ರ ಜಾಗದ ಮಾಲೀಕರದ್ದು ಅಂತಾ ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.